# ಹಿಂದೂಸ್ತಾನಿ ತಾಳವಾದ್ಯ ಸೀನಿಯರ್ ಪ್ರಥಮ ವರ್ಷ

## ಶಾಸ್ತ್ರ,ಪ್ರಾಯೋಗಿಕ ಪತ್ರಿಕೆ -1

## ಪರಿವಿಡಿ


| ಕ್ರಮ ಸಂಖ್ಯೆ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 1 | ಭಾರತೀಯ ಸಂಗೀತ ವಾದ್ಯಗಳ ವರ್ಗೀಕರಣ | 2 |
| 2 | ಪಾರಿಭಾಷಿಕ ಶಬ್ದಗಳು | 3 - 5 |
| 3 | ಜೀವನ ಚರಿತ್ರೆಗಳು | |
| | 1. ಉಸ್ತಾದ್ ಅಲ್ಲಾರಖಾ ಖಾನ್ | 6 - 7 |
| | 2. ಉಸ್ತಾದ್ ಶೇಖ್ ದಾವೂದ್ ಖಾನ್ | 8 – 10 |
| | 3. ಪಂಡಿತ್ ಸಮತಾ ಪ್ರಸಾದ್ | 11-12 |
| 4 | ತಾಳಗಳ ಪರಿಚಯ | |
| * | 1.ತಿಲವಾಡ, 2. ಪಂಜಾಬಿ, 3. ಅದಾ, 4. ತೆವ್ರಾ | 13 -14 |
| 5 | ಝಪ್ತಾಲ್ ದ ಕಾಯ್ದಾ | 15 -16 |
| 6 | ಝಪ್ತಾಲ್ ದ ಪೇಶ್ಕಾರ್ | 17- 18 |
| 7 | ಝಪ್ತಾಲ್ ದ ತುಕಡಾ | 19 |
| 8 | ತೀನ್ ತಾಲದ ರೇಲಾ ಕಾಯ್ದಾ | 20-21 |
| 9 | ಚೌತಾಲ್ ದುಗನ್,ತಿಗುನ್,ಚೌಗುನ್ ಲಯದಲ್ಲಿ | |
| | ಬರೆಯುವ ಪದ್ಧತಿ | 22-23 |

## ಅಧ್ಯಾಯ-1 ಭಾರತೀಯ ಸಂಗೀತ ವಾದ್ಯಗಳ ವರ್ಗೀಕರಣ

ಭಾರತೀಯ ಸಂಗೀತ ಪದ್ಧತಿಯಲ್ಲಿ ವಾದ್ಯ ಸಂಗೀತಕ್ಕೆ ಮುಖ್ಯವಾದ ಸ್ಥಾನವಿದೆ .ಕಾರಣ ವೇದ , ಪುರಾಣ ಮುಂತಾದ ಹಿನ್ನಲೆಯಲ್ಲಿ ವಾದ್ಯಗಳನ್ನು ಬಳಸುವುದನ್ನುನಾವು ಕಥೆ ಹಾಗೂ ಚಿತ್ರಗಳ ಮೂಲಕ ಕಾಣಬಹುದಾಗಿದೆ .ಆಯಾ ವಾದ್ಯಗಳಿಗೆ ತನ್ನದೇ ಆದ ಒಂದು ಪ್ರಾಮುಖ್ಯತೆ ಇದೆ .ಅಲ್ಲದೇ ಅವುಗಳ ಉತ್ಪತ್ತಿ ಬಗ್ಗೆಯೂ ಇತಿಹಾಸವಿದೆ

ಭಾರತೀಯ ಸಂಗೀತ ವಾದ್ಯಗಳು ನಮ್ಮ ಸಂಗೀತ ಪರಿಣಿತರು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿದ್ದಾರೆ .ಅವುಗಳು ತತ ,ಬಿತತ , ಸುಷಿರ ,ಘನ ಹಾಗೂ ಅವನದ್ಧ ವಾದ್ಯಗಳುಕಾಲಕ್ರಮೇಣ ಈ ತರಹ ವಾದ್ಯ ವಿಂಗಡನೆಯಲ್ಲಿ ಅನೇಕ ಬದಲಾವಣೆಗಳು ಆಗುತ್ತಾ ಹೋಗಿವೆ .ಸಂಗೀತ ವಿದ್ವಾಂಸರ ಕಲ್ಪನೆಗೆ ತಕ್ಕ ಹಾಗೆವಾದ್ಯಗಳನ್ನು ನುಡಿಸುವ ಪರಿಣಿತರ ಕಲ್ಪನೆಯಲ್ಲಿ ಅನೇಕ ಹೊಸ ಹೊಸ ವಾದ್ಯಗಳನ್ನು ಕಂಡುಹಿಡಿದು ಅವುಗಳಿಗೆ ಒಂದು ಹೊಸ ಆಯಾಮ ನಿರ್ಮಿಸಿದ್ದಾರೆ .

1.ತತ ವಾದ್ಯಗಳು : ನಾದ ಹೊರ ಹೊಮ್ಮಲು ತಂತಿಗಳನ್ನು ಬಳಸಿ ಬಾರಿಸಲ್ಪಡುವ ವಾದ್ಯಗಳಿಗೆ ತತ ವಾದ್ಯಗಳು ಎಂದು ಕರೆಯುವರು. ಈ ವಾದ್ಯಗಳು ಬೆರಳಿಗಳಿಂದ ತಂತಿ ಮೀಟಿ ಬಾರಿಸುವ ವಾದ್ಯಗಳುಉದಾ: ತಂಬೂರಿ ( ತಾನಪುರ) ಸಿತಾರ, ಬೀನ, ಸರೋದ್, ಸೂರ ಬಹಾರ, ವೀಣೆ, ದತ್ತಾತ್ರೇಯ ವೀಣೆ, ಮೋಹನ ವೀಣೆ, ಮುಂತಾದವುಗಳು.

2. ಬಿತತ ವಾದ್ಯಗಳು : ಈ ವಾದ್ಯಗಳು ಸಹ ತಂತು ವಾದ್ಯಗಳೇ ಆಗಿದ್ದು ನುಡಿಸುವ ಕ್ರಮ ಬೇರೆ ಆಗಿದೆ. ಅಂದರೆ ಕಮಾನಿನ ( ಬೋ ) ಸಹಾಯದಿಂದ ನುಡಿಸುವ ತಂತ ವಾದ್ಯಗಳಿಗೆ ಬಿತತ ವಾದ್ಯಗಳಿಗೆಬಿತತವಾದ್ಯಗಳೆಂದುಕರೆಯುವರು.

ಉದಾ: ದಿಲ್ ರುಬಾ , ಇಸರಾಜ, ಸಾರಂಗಿ, ವಾಯೋಲಿನ್ ಮುಂತಾದವುಗಳು.

3. ಸುಷಿರ ವಾದ್ಯಗಳು : ಗಾಳಿಯ ಒತ್ತಡದಿಂದ ಅಥವಾ ಉಸುರಿನಿಂದ ನುಡಿಸುವ ವಾದ್ಯಗಳಿಗೆ ಸುಷಿರವಾದ್ಯಗಳೆಂದುಕರೆಯುವರು.

ಉದಾ: ಶಹನಾಯಿ, ಬಾನ್ಸೂರಿ (ಕೊಳಲು) ನಾಗಸ್ವರ, ಸುಂದರಿ ವಾದ್ಯ, ಸ್ಯಾಕ್ಸೋ ಫೋನ್,

4 . ಘನ ವಾದ್ಯಗಳು : ಧಾತು ನಿರ್ಮಿತವಾದ , ಆಘಾತದಿಂದ ನಾದ ಹೊರಹೊಮ್ಮುವ ವಾದ್ಯಗಳಿಗೆ ಘನವಾದ್ಯಗಳೆಂದು ಕರೆಯಬಹುದು.

# ಅಧ್ಯಾಯ-2 ಪಾರಿಭಾಷಿಕ ಶಬ್ದಗಳು

1. ಕಾಯ್ದಾ :ತಾಲದ ಮಾತ್ರ ಖಂಡ ಪೆಟ್ಟು ಹುಸಿಗಳಿಂದ ,ವಿಸ್ತಾರ ಪ್ರಧಾನವಾದ ನಿರ್ದಿಷ್ಟ ಬೋಲ್ ಗಳಿಂದ ಶಾಸ್ತ್ರಬದ್ಧವಾಗಿ ರಚಿಸಲ್ಪಟ್ಟ ಕ್ರಮಕ್ಕೆ " ಕಾಯ್ದಾ "ಎಂದು ಕರೆಯುತ್ತಾರೆ ಕಾಯ್ದಾ ಎಂದರೆ ನಿಯಮ ಅಥವಾ ಪಧ್ಧತಿ ಎಂದು ಆಗುವುದು .ಎರಡನೇ ಕಾಲ , ನಾಲ್ಕನೇ ಕಾಲದಲ್ಲಿ ಹೆಚ್ಚಾಗಿ ನುಡಿಸಲಾಗುವುದು .ಕಾಯ್ದಾದ ಪಾತ್ರವು ಸ್ವತಂತ್ರವಾದನದಲ್ಲಿ ಅತ್ಯಂತ ಮಹತ್ವ ಪೂರ್ಣವಾಗಿದೆ.

ಉದಾ : ತೀನ್ ತಾಲ್ ಕಾಯ್ದಾಧಾತಿ ಧಾತಿ ಧಾಧಾ ತಿರಕಿಟ | ಧಾತಿ ಧಾತಿ ಧಾಧಾ ತಿನ್ನಾ| ತಾತಿ ತಾತಿ ತಾತಾ ತಿರಕಿಟ | ಧಾತಿ ಧಾತಿ ಧಾಧಾ ಧಿನ್ನಾ

2.ಪೇಶ್ಕಾರ್ : ತಬಲಾ ಸ್ವತಂತ್ರವಾದನದಲ್ಲಿಪ್ರಪ್ರಥಮವಾಗಿ ಪೇಶ್ಕಾರ್ ವು ದಿಲ್ಲಿ, ಅಜರಾಡ ಮತ್ತು ಪೂರಬ್ ಬಾಜ್ ( ಶೈಲಿ ) ನಲ್ಲಿ ನುಡಿಸುವುದು ಅತ್ಯಂತ ಪರಿಣಾಮಕಾರಿ ವಿಷಯವಾಗಿದೆ ಪೇಶ್ಕಾರ್ ಎಂದರೆ ಪಡಿಸುವುದು ಎಂದು ಸಾಮಾನ್ಯ ಅರ್ಥ. ಇದು ಉರ್ದು ಶಬ್ದವಾಗಿದೆ. ಪೇಶ್ಕಾರವು "ಪೇಶಕರನಾ" ಎಂಬ ಪದದಿಂದ ಬಂದಿರಬಹುದು. ಪೇಶ್ಕಾರವು ಖುಲ್ಲಾ ಮತ್ತು ಬಂದ್ ಬೋಲ್ ಗಳಿಂದ ಕೂಡಿದ್ದುಇದರಲ್ಲಿ ಸಮ್ ಹಾಗೂ ಹುಸಿ ( ಖಾಲಿ ) ಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ಕಾಯ್ದಾದಂತೆ ಇಲ್ಲಿಯೂ ಪಲಟೆ ( ಪ್ರಕಾರ ) ಗಳು ಇರುತ್ತವೆ. ಆದರೆ ಕಾಯ್ದಾಕ್ಕೆ ಇರುವ ಬಂಧನ ಈ ಪೇಶಕಾರ್ ಕ್ಕೆ ಇರುವುದಿಲ್ಲ.ಬೋಲಗಳ ಗತಿಯು ಕಾಯ್ದಾದಂತೆ ನೇರವಾಗಿ ಸಾಗದೆ ವಿಶಿಷ್ಟ ಬಗೆಯ ಅಂದೋಲನ ( ವಝನ್ ) ದಿಂದ ಸಮುದ್ರದ ಅಲೆಗಳ ಹೊರಹೊಮ್ಮುವರು. ಇದರಲ್ಲಿ ಡಗ್ಗಾದ ಪ್ರಯೋಗವು ಹೆಚ್ಚಾಗಿ ಕಂಡು ಬರುವುದು.ಪರಿಣಿತಕಲಾವಿದ ಮಾತ್ರ ಈಪೇಶ್ಕಾರವುನ್ನುಪರಿಣಾಮಕಾರಿಯಾಗಿ ನುಡಿಸಬಲ್ಲ ಉದಾ : ದೀಕ್ಡ ದಿಂದಾ -ಧಾದಿಂಧಾ | ಧಾತಿ ಧಾತಿ ಧಾಧಾ ತಿಂತಾ

3. ತಿಹಾಯಿ : ಚಿಕ್ಕದಾದ ತಬಲಾ ಬೋಲನ್ನು ತಾಲದ ಯಾವುದೇ ಖಂಡ ಅಥವಾ ಯಾವುದೇ ಮಾತ್ರದ ಸ್ಥಾನದಿಂದ ತೆಗೆದುಕೊಂಡು ಮೂರು ಸಾರಿ ನುಡಿಸಿ ಕೊನೆ ಅಕ್ಷರ ( ಬೋಲ್ ) ಸಮ್ ಗೆ ಬರುವಂತಹ ರಚನೆಗೆ ತಿಹಾಯಿ ಎಂದು ಕರೆಯುತ್ತಾರೆ. ತಿಹಾಯಿ ಹೆಚ್ಚೆಂದರೆ ಎರಡರಿಂದ ಮೂರು ಆವರ್ತನೆಯಿಂದ ಕೂಡಿರುತ್ತದೆ.

ಸ್ವತಂತ್ರವಾದನಗಳಲ್ಲಿ ಶಾಸ್ತ್ರೀಯ , ಲಘುಶಾಸ್ತ್ರೀಯ ಸಂಗೀತ ಅಲ್ಲದೆ ಸುಗಮ ಸಂಗೀತ ಭಜನ್ ಮುಂತಾದ ಗಾಯನ ಹಾಗೂ ವಾದನಗಳಿಗೆ ತಿಹಾಯಿಯನ್ನು ಹೆಚ್ಚಾಗಿ ನುಡಿಸುತ್ತಾರೆ. ಸಾಮಾನ್ಯವಾಗಿ ತಿಹಾಯಿಗೆ ಮುರಿಯುವುದು ಎಂತಲೂ ಹೇಳಬಹುದು, ಇದರಲ್ಲಿ ದಂದಾರ್ ತಿಹಾಯಿ ಬೇದಂ ತಿಹಾಯಿ , ನೌಹಾಕ್ಕ ತಿಹಾಯಿ ಎಂದು ಬೇರೆ ಬೇರೆ ಪ್ರಕಾರದ ತಿಹಾಯಿಗಳಲ್ಲಿ ಕಂಡು ಬರುತ್ತವೆ.

ಉದಾ : ಧಾಧಾ ತಿರಕಿಟ ಧಾಧಾ ತೊನಾ ಧಾ S j

ಧಾಧಾ ತಿರಕಿಟ ಧಾಧಾ ತೊನಾ ಧಾ S

ಧಾಧಾ ತಿರಕಿಟ ಧಾಧಾ ತೊನಾ ಧಾ….

**4.** ತುಕಡಾ : ಸಮ್ ನಿಂದ ಪ್ರಾರಂಭಿಸಿ ಸಮ್ ಗೆ ಬರುವ ನಿರ್ದಿಷ್ಟ ಮಾತ್ರಗಳಿಂದ ಕೂಡಿದ ಬೋಲ್ ಗಳಿಗೆ , ತುಕಡಾ ಎಂದು ಕರೆಯುವರು. ತಾಲದ ಒಂದು ಆವರ್ತನೆಗಿಂತ ಹೆಚ್ಚಿದ್ದು ತಿಹಾಯಿ ಇರಬಹುದು . ತುಕಡಾವನ್ನು ಗಾಯನ ವಾದನ ಹಾಗೂ ಸ್ವತಂತ್ರ ವಾದನದಲ್ಲಿ ಹೆಚ್ಚು ನುಡಿಸಲಾಗುವುದು.

ಉದಾ : ಧಾತಿರಕಿಟತಕ ತಾತಿರಕಿಟತಕ ಧಾತಿರಕಿಟತಕ ತಾತಿರಕಿಟತಕ

ತಿರಕಿಟ ತಕತಾತಿರಕಿಟ ಧಾತಿಧಾ S ಧಾ ತಿಧಾ S ಧಾತಿಧಾ…

**5 .** ಮುಕಡಾ : ಯಾವುದೇ ತಾಲದಲ್ಲಿ ಸಮ್ ನಿಂದ ಸಮ್ ಗೆ ನುಡಿಸುವ ಅಥವಾ ತಾಲದ ಯಾವುದೇ ಖಂಡ ಇಲ್ಲವೇ ಮಾತ್ರದಿಂದ ಪ್ರಾರಂಭಿಸಿ ಪುನಃ ಸಮ್ ಗೆ ಬರುವ ಅಕರ್ಷಕ ಬೋಲ್ ಗೆ ಮುಕಡಾ ಎಂದು ಕರೆಯುವರು.ಮುಖಾಡಾದಲ್ಲಿ ತಿಹಾಯಿ ಇರಬಹುದು,ಅಥವಾ ಇಲ್ಲದೇಇರಬಹುದು.ಸಾಮಾನ್ಯವಾಗಿನಾಲ್ಕುಮಾತ್ರಗಳಿಗಿಂತಹೆಚ್ಚಿದ್ದುಒಂದೇಆವರ್ತನೆಯ ಲ್ಲಿಇರುವದು.ಸ್ವತಂತ್ರವಾದನದಲ್ಲಿಅಥವಾಸಾಥಸಾಂಗತದಲ್ಲಿಮುಕಡಾದಪ್ರಯೋಗವು ಹೆಚ್ಚಾಗಿಕಂಡುಬರುತ್ತದೆ.

.ಉದಾ : ಧಾ ದಿನ್ ದಿನ್ ಧಾ | ಧಾ ದಿನ್ ದಿನ್ ಧಾ

ತಿನ್ನಾಕಿಟತಕ ತಾತಿರ ಕಿಟತಕ|ತಿರಕಿಟ ತಕತಾ ತಿರಕಿಟ ಧಾತಿ ||ಧಾ

6. ಪರಣ(ಪರನ್): ಪರಣವು  ಪಖಾವಾಜ್ ವಾದ್ಯದಲ್ಲಿ ನುಡಿಸುವಂತ ವಿಶೇಷ ಬೋಲ್ ಆಗಿದೆ , ಇದು ಖುಲ್ಲಾ ಹಾಗೂ ಜೋರ್ ದಾರ್ ಬೋಲಿನಿಂದ ಹೊರಹೊಮ್ಮುವ  ವಿಶಿಷ್ಟ ಆಕರ್ಷಕ ಬೋಲ್ ಆಗಿದ್ದು ಕಡಿಮೆ ಎಂದರೆ ಎರಡು ಅಥವಾ ಮೂರು ಆವರ್ತನೆಯಲ್ಲಿ ನುಡಿಸಬಹುದಾಗಿದೆ .ಸಾಮಾನ್ಯವಾಗಿ ಪರಣವು ತಿಹಾಯಿಯಿಂದ ಕೂಡಿಕೊಂಡಿರುತ್ತದೆ.

ಈ ರೀತಿಯ ಖುಲ್ಲಾ ಬೋಲಿನ ಪರಣವನ್ನು ತಬಲಾದಲ್ಲಿಯ ನುಡಿಸಬಹುದಾಗಿದೆ. ಇದರ ಪ್ರಯೋಗ ಪೂರಬ್ ಹಾಗೂ ಬನಾರಸ್ ವಾದನದ ಶೈಲಿಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ ಇದರಲ್ಲಿ ಫರಮಾಯಿಷ್ ಪರಣ್,ಹತ್ತಿ ಪರಣ್ ಎಂದು ಬೇರೆ ಬೇರೆ ಪ್ರಕಾರಗಳಿವೆ.

7.   ಉಠಾನ್ : ವು ಪರಣದಲ್ಲಿಯ ಒಂದು ಪ್ರಕಾರವಾಗಿದ್ದು ನೃತ್ಯದಲ್ಲಿ ಇದನ್ನು ಹೆಚ್ಚು ಉಪಯೋಗಿಸುತ್ತಾರೆ . ಠೇಖಾ ಪ್ರಾರಂಭವಾಗುವ ಮೊದಲೇ ನುಡಿಸುವ "  ಪರನ್ " ಅಥವಾ " ಗತ್ತಿಗೆ " " ಉಠಾನ್ " ಎನ್ನುವರು . ತಬಲಾ ಸ್ವತಂತ್ರ ವಾದನದ  ಕೆಲವೊಂದು ಘರಾಣೆಯಲ್ಲಿ ( ವಾದನದ ಶೈಲಿ ) ಇದರ ಉಪಯೋಗ ಕಂಡು ಬರುತ್ತದೆ. ಉಠಾನ್ ವು ತಾಲದ ಒಂದೆರಡು ಆವರ್ತನೆಯಯವರೆಗೂ  ನುಡಿಸಲ್ಪಡುತ್ತದೆ. " ಉಠಾನ್ " ಎಂಬಂದು ಉತ್ಸಾಹ ಪೂರಕವಾದ ತಬಲಾ ( ಪಖವಾಜ್ ) ಬೋಲ್ ಆಗಿರುವುದರಿಂದ ಸ್ವತಂತ್ರವಾದನದಲ್ಲಿ ಹಾಗೂ    ಸಂಗತ್ ದಲ್ಲಿ ವಿಶೇಷ ಮೆರುಗನ್ನು ಕೊಡುತ್ತದೆ.

8.ಗತ್ : ಆಯಾ ತಾಲಕ್ಕೆ ಸಂಭಂದಿಸಿದಂತೆ ಪೆಟ್ಟು ಪೆಟ್ಟು ಹುಸಿಗಳನ್ನು ತೋರಿಸುತ್ತಾ ಆಯಾ ತಾಲದ ವಜನ್ ಗೆ  ಅನುಗುಣವಾಗಿರುವ ಶಾಸ್ತ್ರಬದ್ದ ವಿಶಿಷ್ಟ ರಚನೆಗೆ  " ಗತ್ " ಎನ್ನುವರು.  ಇದರಲ್ಲಿ ಸಾಮಾನ್ಯವಾಗಿ ತಿಹಾಯಿ ಇರುವುದಿಲ್ಲ. ಈ ರೀತಿ ಗತ್ ಗಳ ಪ್ರಯೋಗವು ಪೂರಬ್ ಬಾಜಿನಲ್ಲಿ ಹೆಚ್ಚಾಗಿ  ಕಂಡು ಬರುವುದು. ಒಂದು ರೀತಿಯಲ್ಲಿ ಕಾಯ್ದದಂತೆ ಪೆಟ್ಟು ಹುಸಿಯನ್ನು  ತೋರಿಸುವ ಬೋಲಗಿದ್ದು ಇದರಲ್ಲಿ ಪಲ್ಟಾ ( ಪ್ರಕಾರ) ಗಳು ಇರುವುದಿಲ್ಲ  ಗತ್ ಗಳನ್ನು ಸಾಥ್ ಸಂಗತ್ ಕ್ಕಿಂತಲೂ ತಬಲಾ ಸ್ವತಂತ್ರವಾದನದಲ್ಲಿ ಅದರಲ್ಲಿ ಮಧ್ಯ ಹಾಗೂ ದ್ರುತ್ ಲಯದಲ್ಲಿ ನುಡಿಸಬಹುದಾಗಿದೆ. ಗತ್ ಗಳಲ್ಲಿ ಚಕ್ರದಾರ್ ಗತ್, ಫರಮಾಯಿಷ ಚಕ್ರದಾರ್ ಗತ್, ತ್ರಿಪಲ್ಲಿ ಗತ್, ಚೌಪಲ್ಲಿ ಗತ್, ಹೀಗೆ ವಿವಿಧ ಪ್ರಕಾರಗಳಿವೆ.



# ಅಧ್ಯಾಯ–3 ಜೀವನಚರಿತ್ರೆಗಳು

ಉಸ್ತಾದ್ ಅಲ್ಲಾರಖಾ ಖಾನ್ ಜನನ: ೧೯೧೫, ಕಾಲ : ೨೦೦೦ ಪಂಜಾಬ್ ಘರಾಣೆಯ ಅತ್ಯಂತ ಜನಪ್ರಿಯ ಹಾಗೂ ಶ್ರೇಷ್ಠ ತಬಲಾ ವಾದಕರ ಉಸ್ತಾದ್ ಅಲ್ಲಾರಖಾನ್ ರು ೧೯೧೫ ರಲ್ಲಿ ರತನ್ ಘಡ್ (ಗುರುದಾಸಪುರ ) ದಲ್ಲಿ ಜನಿಸಿದರು. ಇವರ ತಂದೆ ಹಾಶೀಮ್ ಅಲಿಯವರು ಮೂಲತಃ ವ್ಯವಸಾಯದಿಂದ ಬಂದವರು. ಬಾಲ್ಯದಲ್ಲಿಯೇ ಅಲ್ಲಾರಖಾರಿಗೆ ಸಂಗೀತದೆಡೆಗೆ ಒಲವಿತ್ತು ಆದ್ದರಿಂದ ೧೫ ವರ್ಷದವರಿದ್ದಾಗಲೇ ಪಠಾನ್ ಕೋಟ್ ಒಂದು ನಾಟಕ ಕಂಪನಿಯಲ್ಲಿ ನೌಕರಿ ಮಾಡತೊಡಗಿದರು. ಆಗ ಅವರಿಗೆ ಪಂಜಾಬ್ ಘರಾಣೆಯ ಪ್ರಸಿದ್ದ ತಬಲಾ ವಾದಕರಾದ ಉಸ್ತಾದ್ ಕಾದಿರ್ ಬಕ್ಷ ರ ಶಿಷ್ಯರಾದ ಖಾನ್ ಸಾಹೇಬ್ ಲಾಲ್ ಮೊಹಮದ್ ರ ಸಂಪರ್ಕ ಒದಗಿ ಅವರಿಂದಲೇ ತಮ್ಮ ತಬಲಾ ಶಿಕ್ಷಣದ ತರಬೇತಿ ಪಡೆಯತೊಡಗಿದರು. ಕೆಲದಿನಗಳ ನಂತರ ತಮ್ಮ ಚಿಕ್ಕಪ್ಪನವರೊಂದಿಗೆ ಲಹೋರಿಗೆ ಹೋಗುವ ಸುಯೋಗ ದೊರೆಯಿತು. ಅಲ್ಲಿ ಉಸ್ತಾದ್ ಖಾದಿರ್ ಬಕ್ಷರಿಂದಲೆ ತಬಲಾ ಶಿಕ್ಷಣ ಪಡೆದು, ಗುರುಗಳ ಮಾರ್ಗದರ್ಶನದಂತೆ ಸತತ ತಬಲಾ ಅಭ್ಯಾಸದಿಂದ ಉಚ್ಚಮಟ್ಟದ ತಬಲಾ ಕಲಾವಿದರಾಗುವ ಬಯಕೆ ಈಡೇರಿಸಿತು. ಸುಮಾರು ದಿನಗಳ ವರೆಗೆ ಲಾಹೋರ್ ಮತ್ತು ದಿಲ್ಲಿ ಆಕಾಶವಾಣಿ ಕೇಂದ್ರಗಳಿಂದ ತಬಲಾವಾದನ ಪ್ರಸಾರ ವಾಗತೊಡಗಿತು. ಅಲ್ಲಿಂದ ಸುಮಾರು ೧೯೪೦ ರಲ್ಲಿ ಮುಂಬೈಗೆ ಬಂದು ನೆಲೆಸಿದರು. ಅಲ್ಲಿ ಮುಂಬೈ ಆಕಾಶವಾಣಿ ಕೇಂದ್ರದಲ್ಲಿ ನಿಲಯದ ಕಲಾವಿದರಾಗಿ ಕೆಲಸಮಾಡಿದರು. ಕೇಲವೆ ದಿನಗಳಲ್ಲಿ ಉಸ್ತಾದ್ ಅಲ್ಲಾರಖಾ ಸಾಹೇಬರು ಬೇಗ ಜನಪ್ರಿಯರಾಗಿ ಸಂಗೀತ ಜಗತ್ತಿಗೆ ಚಿರಪರಿಚಿತರಾದರು. ಅನೇಕ ಹಿಂದಿ ಚಲನಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇವರಾಗಿದೆ.ಶ್ರೇಷ್ಠ ಹಾಗೂ ಜನಪ್ರಿಯ ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಹಾಗೂ ಉಸ್ತಾದ್ ಅಲ್ಲಾರಖಾ ಸಮ್ಮೇಳನಗಳಲ್ಲಿ ಈ ಜೋಡಿ ಕಲಾವಿದರು ಸಂಗೀತ ಕಛೇರಿ ಇದ್ದೇ ಇರುತ್ತಿತ್ತು. ಉಸ್ತಾದ್ ರು ತಬಲಾ ಸ್ವತಂತ್ರವಾದನ ಹಾಗೂ ಸಾಥ್ ಸಂಗತ್ ಎರಡರಲ್ಲೂ ಎತ್ತಿದ ಕೈ ಅನೇಕ ಸಲ ಕರ್ನಾಟಕೀಯ ಹಾಗೂ ಹಿಂದೂಸ್ತಾನಿ ( ಮೃದಂಗ ಹಾಗೂ ತಬಲಾ ) ವಾದ್ಯಗಳ ಜುಗಲ್ಬಂದಿ ಕಾರ್ಯಕ್ರಮಗಳನ್ನು ನೀಡಿ ಜನಪ್ರಿಯತೆ ಗಳಿಸಿದರು.ವಿವಿಧ ಆಕಾಶವಾಣಿ ಕೇಂದ್ರ ಹಾಗೂ

ದೂರದರ್ಶನ ಕೇಂದ್ರಗಳಿಂದ ಇವರ ತಬಲಾ ವಾದನ ಪ್ರಸಾರವಾಗುತ್ತಲೇ ಇತ್ತು.ಅಲ್ಲದೆ ಪ್ರತಿಷ್ಠಿತ ವಿವಿದ ಕಂಪನಿಗಳಿಂದ ಇವರ ತಬಲಾವಾದನದ ಧ್ವನಿ ಸುರುಳಿಗಳು ಮಾರುಕಟ್ಟೆ ಯಲ್ಲಿ ಸಾಕಷ್ಟು ದೊರೆತಿರುವುದು ಇವರ ಸಾಧನೆಯ ಒಂದು ಮೈಲುಗಲ್ಲು ಪಂಜಾಬ್ ಘರಾಣೆಯ ಪ್ರವರ್ತಕ ಹಾಗೂ ಜನಕ ಪಂ|| ಲಾಲ್ ಭವಾನಿದಾಸ್ ( ಭವಾನಿ ಸಿಂಗ್, ಸುಮಾರು ೧೭೦೦ ರಿಂದ ಕ್ರಿ. ೧೭೮೫ ) ರಲ್ಲಿಯ ಪರಂಪರೆಯಲ್ಲಿ ಉಸ್ತಾದ್ ಕಾದೀರ್ ಬಕ್ಷ ರ ಶಿಷ್ಯರಲ್ಲಿ ಉಸ್ತಾದ್ ಅಲ್ಲಾರ ಖಾನ್ ಸಾಹೇಬರು ಕೆಲವೇ ಪ್ರಮುಖ ತಬಲಾ ವಾದಕರಲ್ಲಿ ಒಬ್ಬರು ಕೈಗಳ ತಯಾರಿ ಹಾಗೂ ಬೊಲ್ ಗಳ ಸ್ಪಷ್ಟತೆ ಇವರ ವಾದನ ಶೈಲಿಯು ಒಂದು ವಿಶೇಷ ಅನೇಕ ಸ್ವಂತ ಕಾಯ್ದಾ ಗತ್ ಚಕ್ರದಾರ್, ಫರಮಾಯಿಷ್ ಚಕ್ರದಾರ್ ಗತ್ ಗಳು ಇವರಿಂದ ರಚಿಸಲ್ಪಟ್ಟಿವೆ.ಉಸ್ತಾದ್ ಅಲ್ಲಾರಖಾ ಖಾನ್ ಸಾಹೇಬರ ಪುತ್ರ ಹಾಗೂ ಜಗತ್ ಪ್ರಸಿದ್ಧಿ ಪಡೆದ ಜನಪ್ರಿಯ ತಬಲಾ ಉಸ್ತಾದ್ ಝಾಕೀರ್ ಹುಸೇನ್ ,ಉಸ್ತಾದ್ ಫಜಲ್ ಖುರೇಷಿ ( ಪುತ್ರ ) ಉಸ್ತಾದ್ ತೋಫಿಖ್ ಖುರೇಷಿ (ಪುತ್ರ) ಪಂ|| ಶಂಕೋಚಟರ್ಜಿ, ಪಂ|| ಹರಿಭಟ್ಟೋಪಾದ್ಯಯ, ಉಸ್ತಾದ್ ಅಬ್ದುಲ್ ಸತ್ತಾರ್, ಪ|| ಅಶೋಕ್ ಗೊಡ್ ಬೋಲೆ, ಕಾಶಿಮ್ ಚೌದರಿ, ಅನುರಾಧ ಪಾಲ್ ( ಮಹಿಳಾ ತಬಲಾ ವಾದಕಿ ) ಪ|| ಯೋಗೇಶ್ ಸಂಶಿ ಮುಂತಾದವರು,ಇವರಶಿಷ್ಯರು.ಉಸ್ತಾದ್ಅಲ್ಲಾರಖಾಖಾನ್ ಸಾಹೇಬರುಮುಂಬೈ ಯಲ್ಲಿ ಹೃದಯಘಾತದಿಂದ ಕ್ರಿ.ಶ.೨೦೦೦ ರಲ್ಲಿಪೈಗಂಬರ್ ವಾಸಿಯದರು.

<u>ಉಸ್ತಾದ್ ಶೇಖ್ ದಾವೂದ್ ಖಾನ್</u>ಜನನ : ೧೯೧೬, ಕಾಲ : ೧೯೯೨ ತಬಲಾ ನವಾಜ್ ಉಸ್ತಾದ್ ಶೇಖ್ ದಾವೂದ್ ಖಾನ್ ರು ಡಿಸೆಂಬರ್ ೧೬, ೧೯೧೬ ರಂದು ಮಹಾ ರಾಷ್ಟ್ರದ ಸೊಲ್ಲಾಪುರದಲ್ಲಿಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದರು . ಇವರ ತಂದೆ ಹಾಸೀಮ್ ಸಾಹೇಬರು ಲೋಕೋಪಯೋಗಿ ಇಲಾಖೆ ಬಿಜಾಪುರದಲ್ಲಿ ಸೇವೆಸಲ್ಲಿಸುತ್ತಿದ್ದರು ಬಾಲಕ ಶೇಖದಾವೂದ್ ತಮ್ಮ ಮೂರನೇ ವಯಸ್ಸಿನಲ್ಲಿಯೇ ಸಂಗೀತದ ಕಡೆಗೆ ಒಲವು ಹೊಂದಿದ್ದರು. ಅಲ್ಲದೆ ಹಾರ್ಮೋನಿಯಂ, ಕೊಳಲು, ಗಾಯನ ಹಾಗೂ ತಬಲಾದಲ್ಲಿ ಅತೀ ಹೆಚ್ಚು ಅಭಿರುಚಿ ತೋರಿಸಿದ್ದರಿಂದ, ತಂದೆಯವರು ಇವರನ್ನು ಸೊಲ್ಲಾಪುರದ ಉಸ್ತಾದ್ ಮೊಹಮೂದ್ ಖಾಸೀಮ್ ಸಾಹೇಬರಲ್ಲಿ ತಬಲಾ ಶಿಕ್ಷಣ ಕಲಿಯಲು ಬಿಟ್ಟರು. ಮುಂದೆ ಉಸ್ತಾದ್ ಶೇಖ್ ದಾವೂದ್ ರು ತಬಲಾ ವಾದನದಲ್ಲಿ ಪರಿಣಿತಿ ಪಡೆದು ಘರಣೆ ಪರಂಪರೆಯ ವಿದ್ಯೆಯನ್ನು ಕರಗತ ಮಾಡಿಕೊಂಡು ಕಠಿಣ ಪರಿಶ್ರಮದಿಂದ ಹಾಗೂ ನಿರಂತರ ತಬಲಾ ಅಭ್ಯಾಸದ ಫಲವಾಗಿ ಶೇಖ್ ದಾವೂದರು ಶ್ರೇಷ್ಠ ತಬಲಾ ವಾದಕರೆನಿಸಿದರು. ನಂತರ ೧೯೩೭ ರಲ್ಲಿ ಆಂದ್ರಪ್ರದೇಶದ ಹೈದ್ರಾಬಾದ್ ಆಕಾಶವಾಣಿಯಲ್ಲಿ ತಬಲಾವಾದಕರಾಗಿ ಸೇವೆ ಸಲ್ಲಿಸಲು ಅವಕಾಶ ದೊರೆಯಿತು.ಹೈದರಾಬಾದಿಗೆ ಬಂದನಂತರ ಪ್ರಸಿದ್ದ ತಬಲಾವಾದಕರಾದ ಉಸ್ತಾದ್ ಅಲ್ಲಾದಿಯಾ ಖಾನ್ ರಲ್ಲಿ ತಬಲಾ ಶಿಕ್ಷಣ ಮುಂದುವರೆಸಿದರು. ಅಲ್ಲದೆ ಏಳೆಂಟು ಗುರುಗಳು ಮಾರ್ಗದರ್ಶನ ಪಡೆದು, ಅವರಲ್ಲಿ ಉಸ್ತಾದ್ ಮಹಮ್ಮದ್ ಖಾನ್ , ಉಸ್ತಾದ್ ಛೋಟೆಖಾನ್ ತರಬೇತಿ ಹೊಂದಿ ತಮ್ಮದೇ ಆದ ವಿಶೇಷ ಶೈಲಿಯನ್ನು ಅಳವಡಿಸಿಕೊಂಡರು.ದಿಲ್ಲಿ ಘರಾಣೆಯ ಹಾಗೂ ಫರೂಕಬಾದ್ ಘರಾಣೆ ಪ್ರಸಿದ್ದ ತಬಲಾವಾದಕ ಇಂದೂರಿನ ಉಸ್ತಾದ್ ಜಹಾಂಗೀರ್ ಖಾನ್ ರಲ್ಲಿ ಶಿಷ್ಯತ್ವ ವಹಿಸಿದರು. ಉಸ್ತಾದ್ ದಾವೂದ್ ಖಾನ್ ರು ದಿಲ್ಲಿ , ಫರೂಕಾಬಾದ್ , ಪೂರಬ್ ( ಲಖನೌ ) ಹಾಗೂ ಬನಾರಸ್ ಘರಾಣೆಯಲ್ಲಿ ನೈಪುಣ್ಯತೆ ಪಡೆದಿದ್ದರು. ನಿರಂತರ ತಬಲಾ ವಿಷಯಗಳ ಬಗ್ಗೆ ಚಿಂತನೆ, ಸತತ ತಬಲಾ ಅಭ್ಯಾಸ ಜ್ಞಾನ ಭಂಡಾರ , ಸಮಯ ಪ್ರಜ್ಞೆ , ಶಿಸ್ತು ದಕ್ಷತೆ , ಮಿತ ಭಾಷೆ, ಶಿಷ್ಯ ವಾತ್ಸಲ್ಯ ,ಹೀಗೆ ಇವರ ಸ್ವಾಭಾವಿಕ ಪ್ರಭಾವದಿಂದ ಅತೀ ಶೀಘ್ರದಲ್ಲಿ ಅತಿ ಉತ್ತಮ ತಬಲಾವಾದಕರಾದರಲ್ಲಿ ಒಬ್ಬರಾದರು. ಒಮ್ಮೆ ಆಕಾಶವಾಣಿಯಲ್ಲಿ ಒಂದು ತಿಂಗಳ ಕಾಲ ೫ ರಿಂದ ೩೦ ಮಾತ್ರದವರೆಗಿನ ಅಪ್ರಚಲಿತ ತಾಲಗಳಲ್ಲಿ ತಬಲಾ ಸ್ವತಂತ್ರ ವಾದನ (ತಬಲಾ ಸೋಲೋ) ನುಡಿಸಿದ ಕೀರ್ತಿ ಇವರದು. ತಬಲಾ ಕ್ಷೇತ್ರದ ಸುಪ್ರಸಿದ್ದ ತಬಲಾ ವಾದಕ ಉಸ್ತಾದ್ ಅಹಮದ್ ಜಾನ್ ಥಿರಖ್ವಾ ಇವರನ್ನು ಹೈದಾರಬಾದಿನ ಥಿರಖ್ವಾ

ಎಂದು ಕರೆಯುತ್ತಿದ್ದರು. ಇವರ ಎಲ್ಲಾ ಘರಣೆಯಾ ಗುರುಗಳಿಂದ ವಿದ್ಯೆ ಸಂಪಾಸಿದ್ದರಿಂದ , ತಬಲಾ ಬೋಲ್ ಗಳ ಭಂಡಾರವೇ ಇತ್ತು. ಇವರು ಆಕಾಶವಾಣಿಯ ಪ್ರಥಮದರ್ಜೆ ಕಲಾವಿದರಾಗಿ ಹೆಸರುವಾಸಿಯಾಗಿದ್ದರು.ಉಸ್ತಾದ್ ಶೇಖ್ ದಾವೂದ್ ಖಾನ್ ರಲ್ಲಿ ಹಳೆಯ ಬಂದೀಶ್ ಗಳ ಭಂಡಾರವೇ ಇತ್ತು. ಇವರು ಡಗ್ಗದಲ್ಲಿ " ಎಡಗೈ ಹೆಬ್ಬೆರಳಿನಿಂದ ವಿಶಿಷ್ಟವಾಗಿ ಘುಮ್ಕಿ" ತೆಗೆಯುವುದು ಇವರ ವಾದನದ ವೈಶಿಷ್ಟ ವಾಗಿತ್ತು. ಹಾಗೂ ಇದನ್ನು ಆವಿಷ್ಕಾರ ಮಾಡಿದವರು ಇವರೆ.ತಬಲಾ ನವಾಜ್ ಉಸ್ತಾದ್ ಶೇಖ್ ದಾವೂದ್ ಖಾನ್ ಸಾಹೇಬರು ದೇಶದ ಉಚ್ಚ ಮಟ್ಟದ ಕಲಾವಿದರುಗಳಿಗೆ ಸಾಥ್ ಸಂಗತ್ ಮಾಡಿದ ಕೀರ್ತಿ ಇವರದು. ಉದಾಹರಣೆ ಕಲಾವಿದರಾದ ಉಸ್ತಾದ್ ಬಡೇಗುಲಾಮ್ ಅಲಿಖಾನ್ , ಉಸ್ತಾದ್ ಬರ್ಕತ್ ಅಲೀಖಾನ್ , ರೋಷ್ ನಾರ ಬೇಗಂ, ಉಸ್ತಾದ್ ಅಬ್ದುಲ್ ವಹೀದ್ ಖಾನ್ ( ಬೇಗಂ ಅಕ್ತರ್ ಗುರುಗಳು ) ಉಸ್ತಾದ್ ಅಬ್ದುಲ್ ಕರೀಮ್ ಖಾನ್, ಪಂ. ಸವಾಯಿ ಗಂಧರ್ವ, ಶ್ರೀಮತಿ ಡಾ|| ಗಂಗೂಬಾಯಿ ಹಾನಗಲ್, ಪಂಡಿತ್ ಭೀಮಸೇನ್ ಜೋಶಿ , ಪಂ. ರವಿಶಂಕರ್ , ಉಸ್ತಾದ್ ವಿಲಾಯತ್ ಖಾನ್ , ಪಂ ಡಿ. ವಿ. ಪಲುಸ್ಕರ್, ಪಂ ವಿನಾಯಕ ರಾವ್ ಪಟವರ್ಧನ್, ಉಸ್ತಾದ್ ಅಲಿಅಕ್ಬರ್ ಖಾನ್ ಪಂ. ಜಸ್ ರಾಜ್, ಪಂ ಮಲ್ಲಿಕಾರ್ಜುನ್ ಮನ್ಸೂರ್, ಪಂ.ಬಸವರಾಜ್ ರಾಜಗುರು. ಹೀಗೆ ಗಾಯಕವಾದಕರ ಪಟ್ಟಿ ಬೆಳುಯುತ್ತಾ ಹೋಗುತ್ತದೆ. ಅತ್ಯಂತ ಹಿತಮಿತವಾಗಿ ಗಾಯನವಾದನಕ್ಕೆ ತೊಂದರೆಯಾಗದಂತೆ ಅರ್ಥ ಮಾಡಿಕೊಂಡು ತಬಲಾ ಸಾಥ್ ಮಾಡುವುದು ಇವರ ವೈಖರಿ. ಉಸ್ತಾದ್ ಶೇಖ್ ದಾವೂದ್ ಖಾನ್ ಸಾಹೇಬರ ಶಿಷ್ಯರು ದೇಶ ವಿದೇಶಗಳಲ್ಲಿ ಪ್ರಖ್ಯಾತಿ ಪಡೆದವರಾಗಿದ್ದಾರೆ. ಅವರಲ್ಲಿ ಅವರ ಪುತ್ರ ಉಸ್ತಾದ್ ಶಬ್ಬೀರ್ ನಿಶಾರ್ ಖಾನ್, ಪಂ. ಪ್ರಭಾಕರ್ ದೇಶಪಾಂಡೆ , ಪಂ. ಕಿರಾಣ್ ದೇಶಪಾಂಡೆ, ಪಂ. ಭೀಮ್ ರಾವ್ ಕನಕದಾರ್ ( ಗುರು ಬಂಧು ಹಾಗೂ ಶಿಷ್ಯರು ) ಪಂ. ಗಿರೀಶ್ ಆವಟಿ, ಪಂ. ಬಿ. ಪ್ರಭಾಕರ್ ರಾವ್ ( ಬೆಂಗಳೂರು ) ಪಂ. ಶಂಕರ್ ಜೈ ಕಿಷನ್, ( ಹಿಂದಿ ಚಲನಚಿತ್ರದ ನಿರ್ದೇಶಕರು) ಪಂ. ಗೌರಂಗ್ ಕೊಡಿಕಲ್, ಪಂ. ಗುರುನಂದನ್ ಕಲ್ಯಾಣ್ ಪುರಕರ್, ಪಂ. ರಘುನಾಥ್ ನಾಕೋಡ್, ಪಂ. ಮೋಹನ್ ರಾವ್ ಕಕ್ಕೇರಿ, ಪಂ. ರಾಜ ಗೋಪಾಲ್ ಕಲ್ಲೂರಕರ್ , ಪಂ. ಜೀವನ್ ಕುಲಕರ್ಣಿ, ಗಜೇಂದ್ರ, ಧನುವಂತ್ ಹಾಗೂ ಮುಂತಾದವರು.

ಪ್ರಶಸ್ತಿ, ಪುರಸ್ಕಾರ, ಪ್ರಚಾರಕ್ಕೆ ಯಾವೊತ್ತೂ ಮಾರುಹೋದವರಲ್ಲ, ಆದರೂ ೧೯೭೨ ರಲ್ಲಿ ಕೇಂದ್ರ ನಾಟಕ ಅಕಾಡೆಮಿ ಪುರಸ್ಕಾರ ದೊರೆಯಿತು ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾದರು. ಪ್ರತಿಷ್ಠಿತ ಹೆಚ್ . ಎಂ. ವಿ. ಕಂಪನಿಯವರು ಇವರ ತಬಲಾ ವಾದನದ ಧ್ವನಿ ಸುರುಳಿಯನ್ನು ಬಿದುಗಡೆ ಮಾಡಿರುವುದು ಹೆಮ್ಮೆಯ ವಿಷಯ.

ತಬಲಾ ನವಾಜ್ ಉಸ್ತಾದ್ ಶೇಖ್ ದಾವೂದ್ ಖಾನ್ ಸಾಹೇಬರು ತಮ್ಮ ಇಳಿವಯಸ್ಸಿನಲ್ಲಿ ಸ್ವಲ್ಪ ಅನಾರೋಗ್ಯದಿಂದ ಬಳಲಿ ೨೧ ಮಾರ್ಚ್ ೧೯೭೨ ರಂದು ದೈವಾಧೀನರಾದರು. ಅಪಾರ ಶಿಷ್ಯ ಬಳಗ ಹಾಗೂ ಅಭಿಮಾನಿಗಳು ಇವರ ಹೆಸರಿನಲ್ಲಿ ತಬಲಾ ನವಾಜ್ ಉಸ್ತಾದ್ ಶೇಖ್ ದಾವೂದ್ ಅಕಾಡೆಮಿ ಆಫ್ ಮ್ಯೂಸಿಕ್ ಸಂಸ್ಥೆಯನ್ನು ಹೈದ್ರಾಬಾದ್ ನಲ್ಲಿ ಸ್ಥಾಪಿಸಿದರು.



<u>ಪಂಡಿತ್ ಸಮತಾಪ್ರಸಾದ್</u>

ಜನನ:೧೯೨೧,೧೯೯೪ ಗುದಯಿ  ಮಹಾರಾಜ ಎಂದೇ ಪ್ರಖ್ಯಾತರಾದ ಪಂ || ಸಮತಾ ಪ್ರಸಾದರು ಬನಾರಸ್ ಘರಾಣೆಯ ಪ್ರಮುಖ ತಬಲಾ ವಾದಕರಲ್ಲಿ ಒಬ್ಬರು ಇವರು ಜನಿಸಿದ್ದು ಉತ್ತರ ಪ್ರದೇಶದ ಬನಾರಸ್ ದಲ್ಲಿ ಕಬೀರ ಚೌರಾ ಎಂಬ ಊರಿನಲ್ಲಿ ಜುಲೈ ತಿಂಗಳು ೧೯೨೦ ರಲ್ಲಿ. ಇವರದು ತಬಲಾ ಪರಂಪರೆಯ ಮನೆತನ.ಬನಾರಸ್ ಬಾಜ್ ದ ಪ್ರಸಿದ್ಧ ತಬಲಾವಾದಕರಾದ ಪಂ || ಬಾಚಾ ಮಿಶ್ರರ ಪುತ್ರರಾದ ಸಮತಾ ಪ್ರಸಾದರು ತಮ್ಮ ಪ್ರಾರಂಬಿಕ ತಬಲಾ ಶಿಕ್ಷಣವನ್ನು ತಂದೆಯವರಿಂದ ಪಡೆದರು. ಬಾಲ್ಯದಿಂದ ತಮ್ಮ ಏಳನೆಯ ವಯಸ್ಸಿನವರಿಗೆ  ಸಮತಾ ಪ್ರಸಾದ್ ರು ತಂದೆಯ ಹತ್ತಿರವೇ ವಿದ್ಯೆ ಕಲಿಕೆ ಮುಂದುವರಿಸಿದರು. ತಂದೆಯ ಅಕಾಲಿಕ  ಮರಣದ ನಂತರ ಸಮತಾ ಪ್ರಸಾದರಿಗೆ ಪಂ|| ಬಿಕ್ಕುಜಿಯವರು ಹತ್ತಿರ ತಬಲಾದ ಹೆಚ್ಚಿನ ಶಿಕ್ಷಣ ದೊರಕಿತು . ಪಂ|| ಬಿಕ್ಕುಜಿಯವರ ಪ್ರಸಿದ್ಧ ತಬಲಾವಾದಕ ಪಂ|| ಬಲದೇವ ಸಹಾಯ್ ಯವರ ಶಿಷ್ಯರು. ಗುರುಗಳು ನೀಡಿದ ವಿದ್ಯೆಯನ್ನು ಸಂಪೂರ್ಣ ಕರಗತ ಮಾಡಿಕೊಂಡ ಸಮತಾ ಪ್ರಸಾದರು ಬೇಗನೇ ಜನಪ್ರಿಯರಾದರು. ಇದಕ್ಕೆ ಕಾರಣ ಇವರ ಕಠಿಣ ಪರಿಶ್ರಮ. ಅಲ್ಲದೆ ತಾಯಿಯ ಕೃಪಾಕಟಾಕ್ಷವೇ ಕಾರಣ. ಸಮತಾ ಪ್ರಸಾದರ ತಾಯಿ ಹುಟ್ಟು ಪ್ರತಿಭಾವಂತೆ, ಸಂಗೀತದ ಬಗ್ಗೆ ಅಪಾರ ಅನುಭವ ಇವರದಾಗಿತ್ತು. ಮಗನ  ಸಂಗೀತ ( ತಬಲಾ) ಶಿಕ್ಷಣ ಯಥೋಚಿತ್ತರಾಗಿ ಮುಂದುವರಿಯಲು  ಎಲ್ಲ ರೀತಿಯ ಅನುಕೂಲ ಮಾಡಿಕೊಟ್ಟರು. ಮಗನಿಗೆ ಆದರ್ಶ ತಾಯಿಯಾಗಿ , ತಂದೆಯಾಗಿ , ಗುರುವಾಗಿ, ಯೋಗ್ಯ ಮಾರ್ಗದರ್ಶನ ನೀಡಿದರು. ಅಲ್ಲದೇ ಅನೇಕ ಹೊಸ ಹೊಸ ತಬಲಾ ಬೋಲಗಳನ್ನು ಹೇಳಿಕೊಡುತ್ತಿದ್ದರು ತಾಯಿಯ ವಾತ್ಸಲ್ಯ ನಿರಂತರ ಕಠಿಣ ತಬಲಾ ಸಾಧನೆಯ ಫಲವಾಗಿ ಸಮತಾ ಪ್ರಸಾದರು ಶ್ರೇಷ್ಠ ಮಟ್ಟದ  ತಬಲಾ ವಾದಕರಲ್ಲಿ ಒಬ್ಬರಾದರು.ಅನೇಕ ಹೆಸರಾಂತ ಸಂಗೀತ ಸಮ್ಮೇಳನದಲ್ಲಿ ಸ್ವತಂತ್ರವಾದನ ಹಾಗೂ ಸಾಥ್ ಸಂಗತ್ ಮಾಡುವ ಅವಕಾಶ ದೊರೆಯಿತು. ಗತ್, ಪರನ್, ಚಂದ್, ಇತ್ಯಾದಿ ಪ್ರಯೋಗವು ಅಧಿಕವಾಗಿ ಮಾಡುತ್ತಿದ್ದರು. ಇವರ ಕೈಯಲ್ಲಿ ರೇಲಾ,  ರೌಗಳು  ಅತ್ಯಂತ ಪ್ರಭಾವಶಾಲಿಯಾಗಿ, ವೇಗವಾಗಿ

ಹೊರಹೊಮ್ಮುತ್ತಿತ್ತು. ತೀನ್ತಾಲ್ ರೂಪಕ್, ಧಮಾರ್ ಮತ್ತು ಸವಾರಿ ತಾಲಗಳು ಪಂ|| ಸಮತಾ ಪ್ರಸಾದರಿಗೆ ಅತೀ ಪ್ರೀಯವಾಗಿದ್ದವು.

ಪಂ||ಸಮತಾ ಪ್ರಸಾದ್ ರವರು ಅನೇಕ ಚಲನಚಿತ್ರಗಳಿಗೆ ಹಿನ್ನಲೆ ತಬಲಾವಾದನ ನುಡಿಸಿದ ಅನುಭವ ಇವರದಾಗಿದೆ. ಇವರಿಗೆ ಪ್ರಶಸ್ತಿ ಪುರಸ್ಕಾರಗಳು ಅನೇಕ, ೧೯೭೨ ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು, ೧೯೮೫ರಲ್ಲಿ ಹಫೀಜ್ ಅಲಿ ಪುರಸ್ಕಾರ ಲಭಿಸಿತ್ತು . ಇವರಿಗೆ ಅನೇಕ ಜನ ಶಿಷ್ಯರಲ್ಲಿ ಪುತ್ರ ಪಂ|| ಕುಮಾರ್ ಲಾಲ್ ಮತ್ತು ಪಂ|| ಕೈಲಾಸ್ ಶ್ರೇಷ್ಠ ತಬಲಾ ವಾದಕರಾಗಿ ಮುಂದೆ ಬಂದರು. ಪಂ||ಸತ್ಯನಾರಾಯಣ ವಸಿಷ್ಠ ಮುಂತಾದವರು ಪ್ರಮುಖರು.

ಇವರ ಸ್ವತಂತ್ರ ವಾದನವನ್ನು ಆಕಾಶವಾಣಿ , ದೂರದರ್ಶನ ಅಲ್ಲದೇ ಅನೇಕ ಪ್ರತಿಷ್ಠಿತ ಕಂಪನಿಗಳು ಇವರ ತಬಲಾ ವಾದನ ಧ್ವನಿ ಸುರುಳಿ ಹಾಗೂ ಗ್ರಾಂ ಫೋನ್ ಗಳು ಕೇಳಲು ಲಭ್ಯ.

ಪಂ|| ಸಮತಾ ಪ್ರಸಾದ್ ( ಗುದಾಯಿ ಮಹಾರಾಜ್ ) ಮಹಾರಾಷ್ಟ್ರದ ಪುಣೆಯಲ್ಲಿ ದಿನಾಂಕ ೩೧ ನೇ ತಿಂಗಳು ೧೯೯೪ ರಲ್ಲಿ ದೈವಾದೀನರಾದರು.

## ಅಧ್ಯಾಯ - 4 ತಾಲ್ – ತಿಲವಾಡ

ಮಾತ್ರ – ೧೬, ಭಾಗ –೪,

ಪೆಟ್ಟು – ೩, ಹುಸಿ – ೧

೧, ೫, ೧೩ ನೇ ಮಾತ್ರಗಳ ಮೇಲೆ ಪೆಟ್ಟು , ೯ ನೇ ಮಾತ್ರದ ಮೇಲೆ ಹುಸಿ

| | | | | | | | | |
|---|---|---|---|---|---|---|---|---|
| ೧ | ೨ | ೩ | ೪ | \| | ೫ | ೬ | ೭ | ೮ |
| ಧಾ | ತಿರಕಿಟ | ದಿನ್ | ದಿನ್ | \| | ಧಾ | ಧಾ | ತಿನ್ | ತಿನ್ |
| X | | | | \| | ೨ | | | |
| ೯ | ೧೦ | ೧೧ | ೧೨ | \| | ೧೩ | ೧೪ | ೧೫ | ೧೬ |
| ತಾ | ತಿರಕಿಟ | ದಿನ್ | ದಿನ್ | \| | ಧಾ | ಧಾ | ದಿನ್ | ದಿನ್ |
| ೦ | | | | \| | ೩ | | | |

<u>ತಾಲ – ಪಂಜಾಬಿ</u>

ಮಾತ್ರ – ೧೬, ಭಾಗ – ೪,

ಪೆಟ್ಟು – ೩, ಹುಸಿ – ೧

೧, ೫,೧೩ ನೇ ಮಾತ್ರದ ಮೇಲೆ ಪೆಟ್ಟು, ೯ ನೇ ಮಾತ್ರ ದ ಮೇಲೆ ಹುಸಿ

| | | | | | | | | |
|---|---|---|---|---|---|---|---|---|
| ೧ | ೨ | ೩ | ೪ | \| | ೫ | ೬ | ೭ | ೮ |
| ಧಾ- | ಗಧಿ | -ಗ | ಧಾ- | \| | ಧಾ- | ಗಧಿ | - ಗ | ಧಾ- |
| x | | | | \| | ೨ | | | |
| ೯ | ೧೦ | ೧೧ | ೧೨ | \| | ೧೩ | ೧೪ | ೧೫ | ೧೬ |
| ಧಾ - | ಕತಿ | -ಕ | ಧಾ- | \| | ಧಾ- | ಧಿಗ | - ಗ | ಧಾ- |
| ೦ | | | | \| | ೩ | | | |

## ತಾಲ : ಅದ್ದಾ

ಮಾತ್ರ : ೮

ಭಾಗ : ೨ ( ೪ , ೪ ) ರಂತೆ

೧ ನೇ ಮಾತ್ರದ ಮೇಲೆ ಪೆಟ್ಟು

೫ ನೇ ಮಾತ್ರದ ಮೇಲೆ ಹುಸಿ

| | | | | | | | | | |
|---|---|---|---|---|---|---|---|---|---|
| ೧ | ೨ | ೩ | ೪ | \| | ೫ | ೬ | ೭ | ೮ | \| |
| ಧಾ | ಧಿನ್ | ಧಾಧಾ | ತಿನ್ | \| | ತಾ | ತಿನ್ | ಧಾಧಾ | ಧಿನ್ | \| |
| x | | | | \| | ೦ | | | | \| |

## ತಾಳ : ತೆವ್ರಾ

ಮಾತ್ರ : ೭ ಭಾಗ : ೩ ( ೩, ೨ ,೨ )

೧ ನೇ ಮಾತ್ರದ ಮೇಲೆ ಸಮ್

೪ , ೬ ನೇ ಮಾತ್ರದ ಮೇಲೆ ಪೆಟ್ಟು

೫ , ೭ ನೇ ಮಾತ್ರದ ಮೇಲೆ ಹುಸಿ.

| | | | | | | | | | |
|---|---|---|---|---|---|---|---|---|---|
| ೧ | ೨ | ೩ | \| | ೪ | ೫ | \| | ೬ | ೭ | \| |
| ಧಾ | ದಿಂ | ತಾ | \| | ತಿಟಿ | ಕತ | \| | ಗದಿ | ಗನ | \| |
| X | | | \| | ೨ | ೦ | \| | ೩ | ೦ | \| |

ಈ ತಾಳವನ್ನು ದ್ರುಪದ್ ಗಾಯನಕ್ಕೆ ಉಪಯೋಗಿಸುತ್ತಾರೆ.

# ಅಧ್ಯಾಯ - 5 ತಾಲ್ ಝಪ್ತಾಲ್ ರೇಲಾ

೧ ನೇ ಪ್ರಕಾರ

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ತೊನಾಕಿಟತಕ |

ತಾತಿರಕಿಟತಕ ತಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ದಿನಾಕಿಟತಕ |

೨ ನೇ ಪ್ರಕಾರ

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಿನಾಕಿಟತಕ ಧಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ತೊನಾಕಿಟತಕ|

ತಾತಿರಕಿಟತಕ ತಿನಾಕಿಟತಕ | ತಾತಿರಕಿಟತಕ ತಿನಾಕಿಟತಕ ತಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ದಿನಾಕಿಟತಕ |

೩ ನೇ ಪ್ರಕಾರ

ಧಾತಿರಕಿಟತಕ ಧಿನಾಕಿಟತಕ | ಧಾ S ಧಾತಿರಕಿಟತಕ ದಿನಾಕಿಟತಕ

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ತೊನಾಕಿಟತಕ |

ತಾತಿರಕಿಟತಕ ತಾತಿರಕಿಟತಕ | ತಾ S ತಾತಿರಕಿಟತಕ ತಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ದಿನಾಕಿಟತಕ |

೪ ನೇ ಪ್ರಕಾರ

ಧಾತಿರಕಿಟತಕ ದಿನಾಕಿಟತಕ | ಧಾ - ದಿನಾಕಿಟತಕ ಧಾ - ಧಿನಾಕಿಟತಕ|

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ತೊನಾಕಿಟತಕ |

ತಾತಿರಕಿಟತಕ ದಿನಾಕಿಟತಕ | ತಾ - ದಿನಾಕಿಟತಕ ತಾ - ತಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ಧಿನಾಕಿಟತಕ |

## ೪ ನೇ ಪ್ರಕಾರ

ಧಾತಿರಕಿಟತಕ ದಿನಾಕಿಟತಕ | ದಿನಾದಿನಾ ಕಿಟತಕ ಧಿನಾ ಧಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ತೊನಾಕಿಟತಕ |

ತಾತಿರಕಿಟತಕ ತಿನಾಕಿಟತಕ | ತಿನಾತಿನಾ ಕಿಟತಕ ತಿನಾ ತಿನಾಕಿಟತಕ |

ಧಾತಿರಕಿಟತಕ ದಿನಾಕಿಟತಕ | ಧಾತಿರಕಿಟತಕ ಧಾತಿರಕಿಟತಕ ಧಿನಾಕಿಟತಕ |

### ತಿಹಾಯಿ

ಧಾತಿರಕಿಟತಕ ಧಿನಾಕಿಟತಕ ದಿನಾಕಿಟತಕ ಧಾ-

ಧಾತಿರಕಿಟತಕ ಧಿನಾಕಿಟತಕ ಧಿನಾಕಿಟತಕ ಧಾ-

ಧಾತಿರಕಿಟತಕ ಧಿನಾಕಿಟತಕ ಧಿನಾಕಿಟತಕ | ಧಿ |

## ಅಧ್ಯಾಯ - 6

## ಝುಪ್ಪಾಲ್ ಪೇಶ್ ಕಾರ್

೧ ನೇ ಪ್ರಕಾರ

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

ತೀಕ್ಡತಿಂತಾ ತಿನ್ನಕಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾಧಿನಾ |

೨ ನೇ ಪ್ರಕಾರ

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

ತೀಕ್ಡತಿಂತಾ ತಿನ್ನಕಿನ್ನ | ತಕ್ಕಿ ಡಾ-ನ್ ತಾತಿಂತಾತಾತಿ ತಾತಾತಿಂತಾ |

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

೩ ನೇ ಪ್ರಕಾರ

ಧೀಕ್ಡಧಿಂದಾ ಧಿನ್ನಗಿನ್ನ | ಧೀಕ್ಡಧಿಂದಾ ಧಿನ್ನಗಿನ್ನ ಧಿನ್ನಗಿನ್ನ |

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

ತೀಕ್ಡತಿಂತಾ ತಿನ್ನಕಿನ್ನ | ತೀಕ್ಡತಿಂತಾ ತಿನ್ನಕಿನ್ನ ತಿನ್ನಕಿನ್ನ |

ಧೀಕ್ಡಧಿಂದಾ ಧಿನ್ನಗಿನ್ನ | ತಗ್ಗಡಾ-ನ್ ಧಾದಿಂಧಾಧಾತಿ ಧಾಧಾದಿಂಧಾ |

೪ ನೇ ಪ್ರಕಾರ

ಧೀಕ್ಡಧಿಂದಾಧಿನ್ನಗಿನ್ನ|ಕಿಟತಕತಿರಕಿಟತಕತಾತಿರಕಿಟ ಧಾತಿದ್ ಧಾಕ್ಧಾಧಾತೊನಾ |
ಧೀಕ್ಡಧಿಂದಾ ಧಿನ್ನಗಿನ್ನ| ತಗ್ಗಡಾ-ನ್  ಧಾದಿಂಧಾಧಾತಿ ಧಾಧಾದಿಂಧಾ|

ತೀಕ್ಡತಿಂತಾ  ತಿನ್ನಕಿನ್ನ  ತೀಕ್ಡತಿಂತಾ  ತಿನ್ನಕಿನ್ನ ತಿನ್ನಕಿನ್ನ |

ತೀಕ್ಡತಿಂತಾ ತಿನ್ನಕಿನ್ನ | ಕಿಟತಕತಿರಕಿಟತಕತಾತಿರಕಿಟ ತಾತಿತ್ ತಾಕ್ಡ ಧಾಧಾಧಿನಾ |

ತಿಹಾಯಿ

ಧಾತಿಧಾತಿ  ಧಿನ್ನಗಿನ್ನ | ಧಿನ್ನಗಿನ್ನ ಧಾ-

ಧಾತಿಧಾತಿ ಧಿನ್ನ| ಗಿನ್ನಧಿನ್ನಗಿನ್ನ ಧಾ - |

ಧಾತಿಧಾತಿ  ಧಿನಗಿನ್ನ ಧಿನ್ನಗಿನ್ನ |

# <u>ಅಧ್ಯಾಯ - 7</u>

## <u>ಝುಪ್ತಾಲ್ ದ ತುಕಡ</u>

೧

ಕತಧಾ ತಿರಕಿಟಧಾ ಕತಕತಧಾ ತಿರಕಿಟ

ಧಾತಿರಕಿಟತಕತಾ ತಿರಕಿಟ ಧಾ S

ಧಾತಿರಕಿಟತಕತಾ ತಿರಕಿಟ ಧಾ S

ಧಾತಿರಕಿಟತಕತಾ ತಿರಕಿಟ ಧಿ....

೨

ಧಾ ತಿರಕಿಟತಕ ತಾ ತಿರಕಿಟತಕ

ತಿರಕಿಟತಕತಾ ತಿರಕಿಟ ಧಾ ತಿರಕಿಟತಕತಾ ತಿರಕಿಟ ಧಾ

ತಿರಕಿಟ ಧಾ S ತಿರಕಿಟ ಧಾ S ತಿರಕಿಟ ಧಾತಿರಕಿಟ ಧಾತಿರಕಿಟ ಧಿ....

೩

ಧಾತಿ- ಧಾತಿ- ಧಾತಿ- ಧಾ ತಿರಕಿಟತಕ ತಾ ತಿರಕಿಟತಕ

ತಿರಕಿಟತಕತಾ ತಿರಕಿಟ ಧಾತಿ ಧಾ Sಧಾತಿಧಾ Sಧಾತಿ ಧಿ....

೪

ಧಾಧಾ ಧಿನ್ ಧಿನ್ ನಾನಾ ತಿಟತಿಟ

ಧಾತಿಟ ಧಿತಿಟ ಕತಧಾ Sಕತಧಾ Sಕತ ಧಿ....

# ಅಧ್ಯಾಯ – 8 ತೀನ್ ತಾಲದ ರೇಲಾ ಕಾಯ್ದಾ

೧ ನೇ ಪ್ರಕಾರ

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

ತಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

೨ ನೇ ಪ್ರಕಾರ

ಧಾ ತಿರಕಿಟತಕ ತಕ್ ತಿರಕಿಟತಕ ಧಾ ತಿರಕಿಟತಕ ತಕ್ ತಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

ತಾ ತಿರಕಿಟತಕ ತಕ್ ತಿರಕಿಟತಕ ತಾ ತಿರಕಿಟತಕ ತಕ್ ತಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ಧಿನ್ನಾ ಕಿಟತಕ |

೩ ನೇ ಪ್ರಕಾರ

ಧಾ ತಿರಕಿಟತಕ ತಕ್ ತಿರಕಿಟತಕ ತಕ್ ತಿರಕಿಟತಕ ತಕ್ ತಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

ತಾ ತಿರಕಿಟತಕ ತಕ್ ತಿರಕಿಟತಕ ತಕ್ ತಿರಕಿಟತಕ ತಕ್ ತಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ಧಿನ್ನಾ ಕಿಟತಕ |

೪ ನೇ ಪ್ರಕಾರ

ಧಾ ತಿರಕಿಟತಕ ಧಿರಧಿರಕಿಟತಕ ಧಿರಧಿರಕಿಟತಕ ಧಿರಧಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

ತಾ ತಿರಕಿಟತಕ ತಿರತಿರಕಿಟತಕ ತಿರತಿರಕಿಟತಕ ತಿರತಿರಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ಧಿನ್ನಾ ಕಿಟತಕ |

೪ ನೇ ಪ್ರಕಾರ

ಧಾ ತಿರಕಿಟತಕ ಧಿನ್ನಾ ಕಿಟತಕ ಧಿನ್ನಾ ಕಿಟತಕ ಧಿನ್ನಾ ಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ |

ತಾ ತಿರಕಿಟತಕ ತಿನ್ನಾಕಿಟತಕ ತಿನ್ನಾಕಿಟತಕ ತಿನ್ನಾಕಿಟತಕ |

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ಧಿನ್ನಾ ಕಿಟತಕ |

ತಿಹಾಯಿ

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಾ ತಿರಕಿಟತಕ ತಕ್ ತಿರಕಿಟತಕ ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ S

ಧಿರಧಿರಕಿಟತಕ ತಿನ್ನಾಕಿಟತಕ ಧಾ .....

# ಅಧ್ಯಾಯ – 9

## ಚೌತಾಲ್ ದುಗನ್, ತಿಗುನ್ , ಚೌಗುನ್ ಲಯದಲ್ಲಿ ಬರೆಯುವ ಪದ್ಧತಿ

### ಮೂಲ ಲಯ

| | | | | | | | | |
|---|---|---|---|---|---|---|---|---|
| ೧ | ೨ | \| | ೩ | ೪ | \| | ೫ | ೬ | \| |
| ಧಾ | ಧಾ | \| | ಧಿಂ | ತಾ | \| | ತಿಟ | ಧಾ | \| |
| x | | \| | ೦ | | \| | ೨ | | \| |
| ೭ | ೮ | \| | ೯ | ೧೦ | \| | ೧೧ | ೧೨ | \| |
| ಧಿಂ | ತಾ | \| | ತಿಟ | ಕತ | \| | ಗಧಿ | ಗನ | \| |
| ೦ | | \| | ೩ | | \| | ೪ | | \| |

### ದುಗನ್

| | | | | | |
|---|---|---|---|---|---|
| ೧ | ೨ | \| | ೩ | ೪ | \| |
| ಧಾಧಾ | ಧಿಂತಾ | \| | ತಿಟಧಾ | ಧಿಂತಾ | \| |
| x | | \| | ೦ | | \| |
| ೫ | ೬ | \| | ೭ | ೮ | \| |
| ತಿಟಕತ | ಗಧಿಗನ | \| | ಧಾಧಾ | ಧಿಂತಾ | \| |
| ೨ | | \| | ೦ | | \| |
| ೯ | ೧೦ | \| | ೧೧ | ೧೨ | \| |
| ತಿಟಧಾ | ಧಿಂತಾ | \| | ತಿಟಕತ | ಗಧಿಗನ | \| |
| ೩ | | \| | ೪ | | \| |

## ತಿಗುನ್

| | | | |
|---|---|---|---|
| ೧ | ೨ | ೩ | ೪ |
| ಧಾಧಾಧಿಂ | ತಾತಿಟಧಾ | ಧಿಂತಾತಿಟ | ಕತಗಧಿಗನ |
| X | | ೦ | |
| ೫ | ೬ | ೭ | ೮ |
| ಧಾಧಾಧಿಂ | ತಾತಿಟಧಾ | ಧಿಂತಾತಿಟ | ಕತಗಧಿಗನ |
| ೨ | | ೦ | |
| ೯ | ೧೦ | ೧೧ | ೧೨ |
| ಧಾಧಾಧಿಂ | ತಾತಿಟಧಾ | ಧಿಂತಾತಿಟ | ಕತಗಧಿಗನ |

## ಚೌಗುನ್

| | | | |
|---|---|---|---|
| ೧ | ೨ | ೩ | ೪ |
| ಧಾಧಾಧಿಂತಾ | ತಿಟದಾದಿಂತಾ | ತಿಟಕತಗದಿಗನ | ಧಾಧಾಧಿಂತಾ |
| X | | ೦ | |
| ೫ | ೬ | ೭ | ೮ |
| ತಿಟದಾದಿಂತಾ | ತಿಟಕತಗದಿಗನ | ಧಾಧಾಧಿಂತಾ | ತಿಟದಾದಿಂತಾ |
| ೨ | | ೦ | |
| ೯ | ೧೦ | ೧೧ | ೧೨ |
| ತಿಟದಾದಿಂತಾ | ಧಾಧಾಧಿಂತಾ | ತಿಟದಾದಿಂತಾ | ತಿಟಕತಗದಿಗನ |
| ೩ | | ೪ | |